ಆ) ಇಲಾಖಾ ವಿಸ್ತರಣಾ ಸಿಬ್ಬಂದಿಯವರ ಮುಖಾಂತರ ರೈತರಿಗೆ ಸಲಹೆ ನೀಡಲಾಗುತ್ತಿದೆ. ಈ ಕ್ರಮ ಅನುಸರಿಸಿದ ತೋಟಗಳಲ್ಲಿ ಈ ರೋಗವು ಮರುಕಳಿಸಿದ್ದು ಕಂಡು ಬಂದಿಲ್ಲ.

ಮಂಗಳೂರು ಕೊಂಕಣ ರೈಲ್ವೆ ಮಾರ್ಗ ನಿರ್ಮಾಣ

೨೩೭. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಲೋಕೋಪಯೋಗಿ ಮತ್ತು ರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯೋಜಿತ ಮಂಗಳೂರು – ಕೊಂಕಣಿ ರೈಲ್ವೆ ಮಾರ್ಗ ರಚನೆಯ ಶೇಫ್ರು ನೀರ್ಮಾಣಕ್ಕೆ ೦ದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ತಂದಿದೆಯೆ ?

ಆ) ಯೋಜಿತ ರೈಲು ಮಾರ್ಗದ ರಚನೆಯನ್ನು ಮಂಗಳೂರು ಕಡೆಯಿಂದಲಿ ಮೊದಲು ಪ್ರಾರಂಭಿಸುವ ವಿಚಾರದ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) —

ಅ) ಹೌದು.

ಆ) ಕೇಂದ್ರ ರೈಲ್ವೆ ಮಂತ್ರಿಗಳಿಗೆ ರಾಜ್ಯದ ಮುಖ್ಯಮಂತ್ರಿಗಳಿಂದ ಮತ್ತು ಲೋಕೋಪ ಯೋಗಿ ಮಂತ್ರಿಗಳಿಂದ ಪತ್ರಗಳನ್ನು ಬರೆದು ಒತ್ತಾಯಿಸಲಾಗಿದೆ. ರಾಜ್ಯದ ಪಾರ್ಲಿಮೆಂಟ್ ಸದಸ್ಯ ರೂ ಸಹ ಈ ಬಗ್ಗೆ ಮಾಹಿತಿಗಳನ್ನು ಕೊಟ್ಟು ಕೇಂದ್ರ ಸರ್ಕಾರದೊಡನೆ ಒತ್ತಾಯಮಾಡಲು ಕೋರ ಲಾಗಿದೆ.

ಹೊಸದುರ್ಗ ತಾಲ್ಲೂಕು ಹಾಗಲಕೆರೆ ಕ್ರಾಸ್‌ನಿಂದ ಚಿಕ್ಕ ಬ್ಯಾಲದ ರಸ್ತೆ ದುರಸ್ತಿ

೨೨೬. ಶ್ರೀ ಎಂ. ರಾಮಪ್ಪ (ಹೊಳಲ್ಕೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕ್ ಹಾಗಲಕೆರೆ ಕ್ರಾಸಿನಿಂದ ಚಿಕ್ಕಬ್ಯಾಲದ ಕೆರೆವರೆಗಿನ ೩೦ ಕಿ. ಮೀ. ಉದ್ದದ ಸರ್ವಋತು ರಸ್ತೆಯಾಗಿ ಪರಿವರ್ತಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಆ) ಹಾಗಿದ್ದಲ್ಲಿ, ಈ ರಸ್ತೆಯಲ್ಲಿ ಸಿಮೆಂಟ್ ಕಂಪೆನಿಗಳ ಲಾರಿಗಳು ಮತ್ತು ಬಸ್ಸುಗಳ ಅಧಿಕ ಭಾರದಿಂದ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದರೂ ರಸ್ತೆ ದುರಸ್ತಿ ಕಾರ್ಯ ನಡೆಯದೆ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಕೊಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾರ್ಯ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆಯು ಮುಖ್ಯ ಜಿಲ್ಲಾ ರಸ್ತೆಯಾಗಿದ್ದು ೩೨ ೨೦ ಕಿ. ಮೀ ಉದ್ದವಿದ್ದು, ಈಗಾಗಲೇ ಸರ್ವಋತು ರಸ್ತೆಯಾಗಿರುತ್ತದೆ. ಈ ರಸ್ತೆಯ ೪ ೪೦ ಕಿ. ಮೀ ಉದ್ದಕ್ಕೆ ಡಾಂಬರ್ ಹಾಕಲಾಗಿದೆ, ಇನ್ನುಳಿದ ೨೭.೮೦ ಕಿ. ಮೀ. ಉದ್ದಕ್ಕೆ ಜಲ್ಲಿ ರಸ್ತೆ ಇರುತ್ತದೆ.

ಆ) ವರ್ಷ ವರ್ಷ ದುರಸ್ತಿಯಾಗುತ್ತಿರುವ ಅನುದಾನಕ್ಕನುಗುಣವಾಗಿ ರಸ್ತೆ ಅವಶ್ಯ ದುರಸ್ತಿ ಕೆಲಸ ಗಳನ್ನು ಕೈಗೊಂಡು, ವಾಹನ ಸಂಚಾರಕ್ಕೆ ತೊಂದರೆಯುಂಟಾಗದಂತೆ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ. ರಸ್ತೆಯ ಇನ್ನುಳಿದ ಭಾಗಕ್ಕೆ ಡಾಂಬರ್ ಹಾಕಲು ಸುಮಾರು ೨೮ ಲಕ್ಷ ರೂ ಗಳು ಬೇಕಾಗಿದ್ದು, ಈ ಕೆಲಸವನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಗಣಿಸಲಾಗುವುದು.